ಶ್ರೀದೇವಿ ಕಳಸದ

ಕಲೆ: ರೂಪಶ್ರೀ ಕಲ್ಲಿಗನೂರ್

# ಬ್ರಾ ಕಳಚಿಟ್ಟ ಒಂದು ದಿನ



ಮನೆಗೆ ಹೋದ್ರೆ ಮಂಚ ಬಿಟ್ಟು ಎದ್ದೇಳಲಿಲ್ಲ ಆ ಹರಿದ್ವರ್ಣಾ. ರೂಮಿನ ಬಾಗಿಲು ತೆಗೆದೇ ಇದ್ರೂ ಎದ್ದು ಹೊರಗೆ ಬರಲಿಲ್ಲ, ನಮ್ಮ ತಮ್ಮನ ಸಂಸಾರಕ್ಕೆ ಅವಳ ಗಂಡನೇ ಚಹಾ ಮಾಡಿಕೊಟ್ಟ. ಹೋಗ್ಲಿ ಅರಿಸಿನ ಕುಂಕುಮ ಕೊಡಕ್ಕಾದ್ರೂ ಎದ್ದ ಬರಬೇಕಲ್ವಾ? ಊಂಹೂ ಹೇಗಿದ್ದೀರಿ, ಯಾವಾಗ ಬಂದ್ರಿ ಅನ್ನೋ ಉಪಚಾರದ ಮಾತೇ ಇಲ್ಲ ಅಂದ್ಮೇಲೆ ಎಲ್ಲೀ ರೀತಿ ಎಲ್ಲೀ ರಿವಾಜು? ಅದೇನಂತ ಹಡೆದರೋ ಅದೇನಂತ ಬೆಳೆಸಿದರೋ? ನಾ ಮೊದಲೇ ಬಡಕೊಂಡೆ ನಮ್ಮ ಅತ್ತಿಗೆಗೆ. ಕಡಿಮೆ ಓದಿದರೂ ಸರಿ, ನಮ್ಮ ಬಳಗದ ಸಂಸ್ಕಾರವಂತ ಹುಡುಗಿಯನ್ನೇ ತರೋಣ ಅಂತ. ಎಲ್ಲಿ ನನ್ನ ಮಾತು ಕೇಳ್ತಾರೆ? ಕೊನೆಗೆ ಚಹಾ ಕುಡಿದ ಕಪ್ಪುಗಳನ್ನೂ ನನ್ನ ತಮ್ಮನ ಹೆಂಡ್ತಿ ಸುಲೂನೇ ಸಿಂಕಿಗೆ ಹಾಕಿಬಂದಳು. ಆಮೇಲೆ ಹಾಲ್‌ನಿಂದ ನಾವೆಲ್ಲಾ ಎದ್ದು ಪೋರ್ಟಿಕೋದಲ್ಲಿ ಕೂತು ಹತ್ತು ನಿಮಿಷ ಆದಮೇಲೆ, ತಲೆಗೊಂದು ಟವೆಲ್ ಸುತ್ಕೊಂಡು ಮಳ್ಳೀ ಥರ ಬಂದು, 'ಕ್ಷಮಿಸಿ, ಬೆಳಗ್ಗೆಯಿಂದ ನಾನು ಎದ್ದೇ ಇರಲಿಲ್ಲ, ಆಫೀಸಿಗೆ ರಜೆ ಹಾಕಿ ಮಲಗಿದ್ದೆ, ಸ್ವಲ್ಪ ಭುಜನೋವು' ಅಂದಳು.

ತನ್ನ ಮಾತನ್ನು ಕೇಳದೆ, ಮಗ ಪ್ರೀತಿಸಿದ ಹುಡುಗಿಯನ್ನೇ ಒಪ್ಪಿ ಅಣ್ಣಅತ್ತಿಗೆ ಮದುವೆ ಮಾಡಿದರು ಎಂಬ ಕಾರಣಕ್ಕೆ ಸುಶೀಲಾಬಾಯಿ ಇದ್ದಬಿದ್ದ ಸಂಬಂಧಿಕರ ಫೋನ್ ನಂಬರ್ ಹುಡುಕಿಕೊಂಡು ವಿಶೇಷ ಸುದ್ದಿಯೆಂಬಂತೆ ಬೆಳಗ್ಗೆಯಿಂದ ಬಿತ್ತರಿಸುತ್ತಿದ್ದಳು. ಈ ಸುದ್ದಿ ಹರಿದ್ವರ್ಣಾಳ ಅತ್ತೆಗೂ ತಲುಪಿತ್ತು. 'ಯಾಕಮ್ಮಾ ಹರಿದ್ವರ್ಣಾ ಹೀಗೇಕೆ ಮಾಡಿದೆ? ನಿಮ್ಮ ಮನೆ ನೆಂಟರಾದರೂ ಅಷ್ಟೇ ನಮ್ಮ ಮನೆ ನೆಂಟರಾದರೂ ಅಷ್ಟೇ. ಮನೆಗೆ ಬಂದವರನ್ನ ಒಂದೇ ರೀತಿ ನೋಡಿಕೊಳ್ಳಬೇಕಲ್ವೇನಮ್ಮಾ? ಅದರಲ್ಲೂ ಆತಿಥ್ಯ, ಉಪಚಾರದಲ್ಲಿ ನಮ್ಮ ಮನೆತನದ್ದು ಎತ್ತಿದ ಕೈ. ಅಂಥದ್ದರಲ್ಲಿ ನಮ್ಮ ಮನೆಗೆ ಬಂದ ಸೊಸೆ ಹೇಗಿರಬೇಕು? ಇದರಿಂದ ನಮ್ಮ ಮರ್ಯಾದೆ ಏನಾಗುತ್ತೆ? ಮದುವೆಯ ಮೊದಲೇ ಇದನ್ನೆಲ್ಲ ನಿನಗೆ ಹೇಳಿರಲಿಲ್ಲವೆ?' ಬೆಳಗ್ಗೆಬೆಳಗ್ಗೆ ಅತ್ತೆ ಮೊದಲ ಸಲ ಕ್ಲಾಸು ತೆಗೆದುಕೊಂಡಿದ್ದರು. ಏನು ಹೇಳುವುದು? ದೊಡ್ಡ ಉಸಿರೊಂದನ್ನು ಬಿಟ್ಟು ಎದೆ ಮೇಲೊಮ್ಮೆ ಕೈಯ್ಯಾಡಿಸಿಕೊಂಡು ಕುಳಿತಳು.

